ಸಂಜೆವಾಣಿ
1982 ರಿಂದ ನಿಮ್ಮ ಸೇವೆಯಲ್ಲಿ

# ವಿಶ್ಲೇಷಣೆ ಸ್ಥಿತ್ಯಂತರಗಳ ಬಗ್ಗೆ ಚರ್ಚೆಗೆ ಆಗ್ರಹ




ಬೆಂಗಳೂರು, ಮಾ. 11 – ದತ್ತಾಂಶಗಳ ವಿಶ್ಲೇಷಣಾಶೀಲತೆ ಮತ್ತು ಉದ್ಯೋಗಿಗಳಲ್ಲಿನ ಸ್ಥಿತ್ಯಂತರವನ್ನು ನಿಭಾಯಿಸುವ ಕುರಿತಂತೆ ಇಂದು ಹೆಚ್ಚು ಚರ್ಚೆಯಾಗಬೇಕಿದೆ ಎಂದು ವಿಪ್ರೋ ಟೆಕ್ನಾಲಜೀಸ್ ಉಪಾಧ್ಯಕ್ಷೆ ನಂದಿನಿ ಮತಿಯಾನಿರವರು ಅಭಿಪ್ರಾಯಪಟ್ಟಿದ್ದಾರೆ.

ಜೈನ್ ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಮಾನವ ಸಂಪನ್ಮೂಲ ನಿರ್ವಹಣೆಯಲ್ಲಿ ಬದಲಾಗುತ್ತಿರುವ ಪಾತ್ರ ಮತ್ತು ಸವಾಲ್ ಕುರಿತಂತೆ ಪ್ರಧಾನ ಭಾಷಣ ಮಾಡಿದರು.

ಇಂದು ಉದ್ಯೋಗಿಗಳ ಸಂಬಳ ವ್ಯವಸ್ಥೆ ಮಾಡುತ್ತಿದ್ದ ಎಚ್.ಆರ್. ವಿಭಾಗ ಸಿಬ್ಬಂದಿಗಳು ಕಂಪನಿ ಮುಖ್ಯಸ್ಥರೊಂದಿಗೆ ಸಂಸ್ಥೆ ಕಾರ್ಯಪ್ರಗತಿ ಬಗ್ಗೆ ಚರ್ಚಿಸುವಂತಹ ವಾತಾವರಣ ಉಂಟಾಗಿದೆ ಎಂದರು.

**ಪರಸ್ಪರ ಜೋಡಣೆ**

ಮಹೀಂದ್ರ ಏರೋಸ್ಪೇಸ್ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿ ದಯಾನಂದ ಗುಡ್ಡೀನ್ ಮಾತನಾಡಿ, ನಿರಂತರ ಪ್ರಕ್ರಿಯೆಯಾಗಿರುವ ಕಾರ್ಯತಂತ್ರಗಳ ಬಗ್ಗೆ ಮಾತನಾಡುವುದಾದರೆ ಜನರು ಮತ್ತವರ ಪ್ರತಿಭೆಗಳ ಕಾರ್ಯತಂತ್ರದ ಕೊಂಡಿಗೆ ಪರಸ್ಪರ ಜೋಡಿಸುವಂತೆ ನೋಡಿಕೊಳ್ಳಬೇಕಾಗುತ್ತದೆ ಎಂದರು.

ಸಿನಾಯ್ ಗ್ಲೋಬಲ್ ಸಂಸ್ಥಾಪಕ ನಿರ್ದೇಶಕ ಆರೋನ್ ಪಾಟ್ನ್‌ರವರು ಸೇವೆ ಮಾಡುವ ಕೈಗಳು ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಪವಿತ್ರ ಎಂದರು.

ಜೈನ್ ವಿವಿ ಕಾಮರ್ಸ್ ವಿಭಾಗದ ಶೈಕ್ಷಣಿಕ ಸಮನ್ವಯಾಧಿಕಾರಿ ರಾಜ್‌ದೀಪ್ ಕೆ. ಮನ್ವಾಣ ಬ್ಲೂಮನ್, ತರಬೇತಿ ಸಂಸ್ಥಾಪಕ ಚೆರಿಯನ್ ಥಾಮಸ್, ಜೈನ್ ವಿವಿ ಎಚ್.ಆರ್. ಮತ್ತು ಕಮ್ಯುನಿಕೇಷನ್‌ನ ಕಾರ್ಯತಂತ್ರ ನಿರ್ದೇಶಕ ಅಪರ್ಣ ಪ್ರಸಾದ್ ಮತ್ತಿತರರಿದ್ದರು.